ಓ.ಎಸ್. ನಂಬರಃ 112/2015

**ಪಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 21-06-2025)

**ಮುಂದುವರಿದ ಪಾಟೀ ಸವಾಲು : 1ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಆರ್.ಬಿ. ವಕೀಲರಿಂದ,**

ದಾವಾ ಆಸ್ತಿಯಲ್ಲಿ ನನ್ನ ಅಜ್ಜ ಅಥವಾ ನನ್ನ ಮುತ್ತಜ್ಜ ವಾಸವಾಗಿದ್ದಾರೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಆದರೆ ಅಲ್ಲೇ ವಾಸವಾಗಿದ್ದರು. ದಾವಾ ಆಸ್ತಿಯಲ್ಲಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ ವಾದಿಗಳಾದ ನಮಗೆ, 1 ಮತ್ತು 2ನೇ ಪ್ರತಿವಾದಿಯವರ ನಡುವೆ ಯಾವತ್ತು ತಕರಾರು ಆಗಿರುವುದಿಲ್ಲ. ದಾವಾ ಆಸ್ತಿಯಲ್ಲಿ ತೆಂಗು, ಅಮಟೆ ಮರ, ಬಾಳೆ ಗಿಡ, ಸೀತಾಫಲ ಗಿಡ ಇರುತ್ತದೆ. ಸದ್ರಿ ಮರಗಳ ಫಲ ಉತ್ಪನ್ನಗಳನ್ನು ಪ್ರತಿವಾದಿಗಳು ತೆಗೆಯುವುದಕ್ಕೆ ನಮ್ಮ ತಕರಾರು ಇರುತ್ತದೆ. ಅವುಗಳನ್ನು ನಾವೇ ತೆಗೆಯುತ್ತಿದ್ದೇವೆ. ನಮ್ಮ ತಕರಾರು ಏನೆಂದರೆ, ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯು ನಾನು ಹೇಳುವಂತೆ ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಮೂಲ ದಾಖಲೆ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಈ ದಾವೆಯ ವಾದ ಪತ್ರದಲ್ಲಿ ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಘೋಷಣೆ ಮಾಡಲು ಪರಿಹಾರ ಕೇಳಿರುತ್ತೇವೆ. ಸಾಕ್ಷಿಯು ಮುಂದುವರೆದು, ದಾವಾ ಆಸ್ತಿಯು ನಮ್ಮ ಆಸ್ತಿಯಾಗಿದ್ದು ಅದನ್ನು ವಾಪಸ್ಸು ಪಡೆದುಕೊಳ್ಳಲು ಕೇಳಿರುತ್ತೇವೆ ಎಂದು ಹೇಳಿರುತ್ತಾರೆ.

2. ದಾವಾ ಆಸ್ತಿಯಲ್ಲಿ ಬೆಂಕಿ ಅವಗಡ ಆಗಿದೆಯಾ ಎಂದರೆ, ಸಾಕ್ಷಿಯು 1ನೇ ಪ್ರತಿವಾದಿಯವರೇ ಬೆಂಕಿ ಹಾಕಿರುತ್ತಾರೆ ಎಂದು ಉತ್ತರಿಸಿರುತ್ತಾರೆ. 1ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿರುವ ಕಟ್ಟಡಕ್ಕೆ ಬೆಂಕಿ ಹಾಕಿರುತ್ತಾರೆ. ಸದ್ರಿ ಕಟ್ಟಡಕ್ಕೆ ಕಟ್ಟಡ ಸಂಖ್ಯೆ ಇರುವುದಿಲ್ಲ. ಸದ್ರಿ ಕಟ್ಟಡವು ಸಂಪೂರ್ಣ ಸುಟ್ಟು ಹೋಗಿರುತ್ತದೆ. ಈಗ ಮತ್ತೆ ನಾವು ಕಟ್ಟಿರುತ್ತೇವೆ. ಆ ರೀತಿ ಕಟ್ಟಡ ಸುಟ್ಟು ಹೋದ ನಂತರ 15 ದಿನ ಕಳೆದು ಹೊಸ ಕಟ್ಟಡ ಕಟ್ಟಿರುತ್ತೇವೆ. ಸದ್ರಿ ಹೊಸ ಕಟ್ಟಡಕ್ಕೆ ಕಟ್ಟಡ ಸಂಖ್ಯೆ ಕೊಡಬೇಕೆಂದು ಕೇಳಿ ಪುರಸಭೆಗೆ ಕೇಳಿರುವುದಿಲ್ಲ. ನಾನು ಈ ಮೇಲೆ ಹೇಳಿದಂತೆ 1ನೇ ಪ್ರತಿವಾದಿ ಕಟ್ಟಡಕ್ಕೆ ಬೆಂಕಿ ಹಾಕಿದ್ದಕ್ಕಾಗಿ ಪೋಲೀಸರಿಗೆ ದೂರು ನೀಡಿರುತ್ತೇನೆ. ಹಾಗೆ ದೂರು ನೀಡಿರುವ ಬಗ್ಗೆ ದಾಖಲಾತಿ ಇರುತ್ತದೆ. ಸದ್ರಿ ದೂರಿನ ಆಧಾರದಲ್ಲಿ 1ನೇ ಪ್ರತಿವಾದಿಯ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ. ಸದ್ರಿ ಪ್ರಕರಣದ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ನನಗೇನು ತೊಂದರೆ ಇಲ್ಲ. ಈ ಮೇಲೆ ಹೇಳಿದಂತೆ ದಾವಾ ಆಸ್ತಿಯಲ್ಲಿರುವ ಕಟ್ಟಡಕ್ಕೆ 1ನೇ ಪ್ರತಿವಾದಿ ಬೆಂಕಿ ಹಾಕಿ ಸುಟ್ಟ ವಿಚಾರ ಮತ್ತು ಕಟ್ಟಡ ಸಂಪೂರ್ಣ ಸುಟ್ಟು ಹೋದ ವಿಚಾರ ಹಾಗೂ ನಾವು ಹೊಸ ಕಟ್ಟಡ ಕಟ್ಟಿದ ವಿಚಾರವನ್ನು ಈ ದಾವೆಯ ವಾದ ಪತ್ರ ತಯಾರಿಸುವಾಗ ನನ್ನ ವಕೀಲರಿಗೆ ಹೇಳಿರುತ್ತೇನೆ. ಈಗ ದಾವಾ ಸ್ಥಳದಲ್ಲಿ ಹೊಸ ಕಟ್ಟಡ ಇರುತ್ತದೆ. ನಾನು ಈ ಮೇಲೆ ಹೇಳಿದಂತೆ 1ನೇ ಪ್ರತಿವಾದಿ ಕಟ್ಟಡಕ್ಕೆ ಬೆಂಕಿ ನೀಡಿರುವುದಿಲ್ಲ, ಹಾಗೆ ಕಟ್ಟಡ ಸುಟ್ಟು ಹೋಗಿರುವುದಿಲ್ಲ, ಅದೇ ರೀತಿ ಆ ಬಗ್ಗೆ ನನ್ನ ಬಳಿ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಾದ ನಾವು ಬಲವಂತವಾಗಿ ದಾವಾ ಆಸ್ತಿಯಲ್ಲಿ ಒಂದು ಶೆಡ್

ಕಟ್ಟಡವನ್ನು ಕಟ್ಟಿ, ದಾವಾ ಆಸ್ತಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿರುತ್ತೇವೆ ಎಂದರೆ ಸುಳ್ಳು.

3. ಪ್ರಸ್ತುತ ದಾವಾ ಆಸ್ತಿಯು 1ನೇ ಪ್ರತಿವಾದಿಯ ಸ್ವಾಧೀನದಲ್ಲಿರುತ್ತದೆ ಎಂದರೆ, ಸಾಕ್ಷಿಯು ಅದು ಸುಳ್ಳು ದಾಖಲೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಿತ್ರಾರ್ಜಿತ ಹಕ್ಕಾಗಲೀ ಅಥವಾ ಇನ್ಯಾವುದೇ ಹಕ್ಕಾಗಲೀ ಪ್ರಾಪ್ತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕಾಗಿಯೇ 1ನೇ ಪ್ರತಿವಾದಿಯ ಹೆಸರಿನಲ್ಲಿ ಆದ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ಇವತ್ತಿನವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದು ನಮ್ಮದೇ ಜಾಗ ಆಗಿರುತ್ತದೆ. 1ನೇ ಪ್ರತಿವಾದಿಯು ಅಮಾಯಕರಾಗಿರುವುದರಿಂದ, ಅವರ ಮೇಲೆ ದಬ್ಬಾಳಿಕೆ ಮಾಡಿ, ದಾವಾ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ಕೇಳಿದ ಯಾವುದೇ ಪರಿಹಾರ ಪಡೆಯಲು ನಾವು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ.

**2ನೇ ಪ್ರತಿವಾದಿ ಪರ ವಕೀಲರು 1ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**